ಸರಿಯೇ ? ಹೀಗೆ ಮಾಡಿದರೆ ಅವರ ಸಂಸಾರದ ಗತಿಯೇನು ? ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ಸಹಾನುಭೂತಿಯ ಬಗ್ಗೆ ನನಗೆ ಬಹಳ ಅನುಕಂಪ ಏದೆ. ಅವರಿಗೆಷ್ಟು ತೊಂದರೆ ಇದೆಯೆಂಬುದನ್ನು ಒಂದು ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕವರಿಗೆ ಹೆಚ್ಚಿಗೆ ಹೇಳಬೇಕಾದ್ದೇನೂ ಇಲ್ಲ. ಎಂ. ಬಿ. ಬಿ. ಎಸ್. ಕಂಡೆನ್ಸ್ ಡಿಗ್ರೀ ಕೋರ್ಸನ್ನು ಪಡೆಯುವುದಕ್ಕಾಗಿ ಅವರನ್ನು ಸರ್ಕಾರದವರೇನೂ ಡೆಪ್ಯೂಟ್‌ಮಾಡಿಲ್ಲ. ಈ ಹಿಂದೆ ಇದಕ್ಕೆ ಯಾರನ್ನು ಚುನಾಯಿಸಲಾಗುತ್ತಿತ್ತೋ ಅವರೆಲ್ಲರೂ ಅವರ ಸೀನಿಯಾರಿಟಿಯನ್ನೂ ಕೂಡ ಕಳೆದು ಕೊಂಡು ಇದನ್ನು ಅಭ್ಯಾಸ ಮಾಡುವುದಕ್ಕೆ ಹೋಗುತ್ತಿದ್ದರು. ನಾವಾದರೋ ಈ ದಿವಸ ಅವರಿಗೆ ಅವರ ಸೀನಿಯಾರಿಟಿ ಹೋಗದಂತೆ ಒಂದು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಹಿಂದೆ ಈ ಅಭ್ಯಾಸಕ್ಕೆ ಹೋದವರೆಲ್ಲಾ ತಮ್ಮ ಸೀನಿಯಾರಿಟಿಯನ್ನು ಕಳೆದುಕೊಂಡು ಅವರ ಜೂನಿಯರ್ಸ್ ಈಗ ಸೀನಿಯರ್ಸ್ ಆಗಿದ್ದಾರೆ. ಈಗ ನಾವು 60 ಜನ ಡಾಕ್ಟರನ್ನು ಕಳುಹಿಸಿದ್ದೇವೆ. ಅದರಿಂದ 60 ಆಸ್ಪತ್ರೆಗಳಲ್ಲಿ ಡಾಕ್ಟರಿಲ್ಲದಂತಾಗಿದೆ. ಆ ಒಂದು ತೊಂದರೆ ಸಹಾ ಉಂಟಾಗಿದೆ. ಅವರು ಅಲ್ಲಿ 3 ವರ್ಷಗಳ ಕಾಲ ಅಭ್ಯಾಸ ಮಾಡಬೇಕಾಗಿದೆ. ಅವರು ಅದನ್ನು ಮುಗಿಸಿಕೊಂಡು ಬಂದ ಕೂಡಲೇ ಅವರು ಹಿಂದೆ ಸಂಬಳ ಭತ್ತೆ ಎಲ್ಲಾ ಸೇರಿ 300 ರೂಪಾಯಿಗಳನ್ನು ಪಡೆಯುತ್ತಿದ್ದ ಕಡೆ ನಾವು ಇನ್ನು ಮುಂದೆ ಅವರಿಗೆಲ್ಲಾ ರಾಜ್ಯದ ಬೊಕ್ಕಸದಿಂದ 450 ರೂಪಾಯಿಗಳ ಸಂಬಳ ಕೊಡ ಬೇಕಾಗುತ್ತದೆ. ಅದನ್ನು ಕೊಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾದ ವಿಷಯ ಇದು. ಆದರೆ ನಾನು ಇಷ್ಟೆಲ್ಲವನ್ನು ಹೇಳಿದರೂ ಅವರ ಜೀವನದ ಪ್ರಶ್ನೆ ಏನೆಂಬುದು ಹಾಗೇ ಉಳಿದಿದೆ. ಮಾನ್ಯ ಸದಸ್ಯರು ಈ ದಿನ ಯಾರನ್ನು ಡೆಪ್ಯುಟೇಷನ್ ಮೇಲೆ ಕಳುಹಿಸಲಾಗುತ್ತಿತ್ತೋ ಅವರಿಗೆಲ್ಲಾ ಸಂಬಳವನ್ನು ಕೊಡಲಾಗುತ್ತಿತ್ತು. ಇಲ್ಲವೇ ಅವರಿಗೇನೇನು ಸೌಲಭ್ಯಗಳನ್ನು ಒದಗಿಸಲಾಗಿತ್ತೋ ಆ ಸೌಲಭ್ಯಗಳನ್ನು ಇವರಿಗೂ ಒದಗಿಸ ಬೇಕೆಂದು ಕೇಳಿದ್ದಾರೆ. ಯಾವಾಗಲೂ ಮಹಿಳಾ ಸದಸ್ಯರ ಗಮನ ಸಂಸಾರದ ಕಡೆಗೆ ಓಡುತ್ತದೆಯೇ ವಿನಾ ಅದು ಸಂಪಾದನೆಯ ಕಡೆಗೆ ಓಡುವುದಿಲ್ಲ. ಆದರೂ ಈ ವಿಚಾರದಲ್ಲಿ ಸರ್ಕಾರದವರಿಗೆ ಅನುಕೂಲ ಮಾಡಿಕೊಡಲು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

Mr. SPEAKER.—Now I will put the question to the vote of the House. The question is :

> "That a sum not exceeding Rs. 11,36,91,000 be granted to the Government to defray the charges which will come in course of payment during the financial year for the period ending 31st March 1968 in respect of Medical and Public Health."

The motion was adopted.

ELECTION OF MEMBERS TO THE SENATE OF THE MYSORE UNIVERSITY

(Results)

Mr. SPEAKER.—Now I have to announce the election results. At the election held to the Senate of the Mysore University on 6th July 1967, the following members are declared elected to the Senate :

1 Sri B. Vithaldas Shetty.
2 Sri K. M. Thammaiah.
3 Sri Nagappa.
4 Sri Kondajji Basappa.
5 Sri G, T. Govinda Reddy.
6 Sri T. R. Shamanna.

(MR. SPEAKER)

The results of the election to the Senate of the Karnatak University will be announced tomorrow.

The House will now stand adjourned to re-assemble tomorrow at 8-30 A.M.

The House adjourned at Fifty Minutes past Seven of the Clock to meet again at Thirty Minutes past Eight of the Clock on Saturday, the 8th July 1967.